**(ಇಂದು ದಿಃ ದಿಃ 11 /04/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಎದ್ರುದಾರರ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ದಿಃ 19.07.2021 ರಂದು ಎದುರುದಾರರ ತಾಯಿ ಹಾಗೂ ಸಹೋದರಿಯರು ನನ್ನ ಮೇಲೆ ಹಲ್ಲೆ ಮಾಡಿದ್ದರು. ಸದರಿ ದಿನಾಂಕವನ್ನು ನಾನು ಅರ್ಜಿಯಲ್ಲಿ ಬರೆದಿಲ್ಲ . ಹಲ್ಲೆ ಮಾಡಿದ ಬಗ್ಗೆ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ದೂರನ್ನು ದಾಖಲಿಸಿದ ಬಗ್ಗೆ ಯಾವುದೇ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಹೇಳುವಂತಹ ಘಟನೆ ನಡೆದೇ ಇಲ್ಲ ಎಂದರೆ ಸರಿಯಲ್ಲ. ದಿಃ 18.07.2021 ರಂದು ನಾನು ಕಾರವಾರಕ್ಕೆ ಹೋಗಿರುತ್ತೇನೆ. ಕಾರವಾರದಲ್ಲಿ ರಾತ್ರಿ 8.00 ಗಂಟೆಗೆ



ಮಹಿಳಾ ಠಾಣೆಯಲ್ಲಿ ನಾನು ದೂರು ದಾಖಲಿಸಿರುತ್ತೇನೆ. ಮಹಿಳೆ ಠಾಣೆಯಲ್ಲಿ ಯಾವುದೇ ಕ್ರಮವನ್ನು ಕೈ ಗೊಂಡಿರುವುದಿಲ್ಲ. ನಾನು ಮಹಿಳಾ ಠಾಣೆಗೆ ಹೋಗಿದ್ದೇ ಇಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಕಾರವರದಲ್ಲಿ ನಾನು ಉಳಿದುಕೊಂಡ ಲಾಡ್ಜ ನ ಹೆಸರು ನನಗೆ ಗೊತ್ತಿಲ್ಲ. ಲಾಡ್ಜ ನಯಿಮ್ ಶೇಖ್ ಎನ್ನುವವರ ಹೆಸರಿನಲ್ಲಿ ಬುಕ್ ಆಗಿತ್ತು. ನಯಿಮ್ ಅವರ ಹೆಸರಲ್ಲಿ ಲಾಡ್ಜ ಬುಕ್ ಅಗಿದೆ ಎಂದು ತೋರಿಸಲು ದಾಖಲೆಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಲಾಡ್ಜ ನಯಿಮ್ ಅವರ ಹೆಸರಲ್ಲಿ ಲಾಡ್ಜ ಬುಕ್ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದ ಕಾರಣ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಕಾರವಾರದ ಸದಾಶಿವಗಡದಲ್ಲಿರುವ ಸೀಮಾ ಎಂಬುವವರ ಜೊತೆ ಎದುರದಾರರಿಗೆ ಅನೈತಿಕ ಸಂಬಂಧ ಇದೆ ಎಂದು ನಾನು ನನ್ನ ಅರ್ಜಿಯಲ್ಲಿ ಬರೆದಿರುತ್ತೇನೆ. ಸದರಿ ವಿಷಯ ನಾನು ಅರ್ಜಿಯಲ್ಲಿ ಬರೆದಿಲ್ಲ ಇದೇ ಮೊದಲ ಬಾರಿ ನಾನು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದಾಶಿವಗಡದಲ್ಲಿ ಸೀಮಾ ಅವರ ಮನೆ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಅನೈತಿಕ ಸಂಬಂದ ಇರುವ ಬಗ್ಗೆ ನನಗೆ ಎದುರುದಾರರೇ ಹೇಳಿದ್ದಾರೆ. ಸದರಿ ವಿಷಯವನ್ನು ಯಾವತ್ತೂ ಎದುರುದಾರರು ನನಗೆ ಹೇಳಿದ್ದೇ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಸೀಮಾ ಎನ್ನುವಂತಹ ಯಾವುದೇ ವ್ಯಕ್ತಿ ಇಲ್ಲ ಹಾಗೂ ಅವರ ಜೊತೆ ಎದುರುದಾರರಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಎದುರುದಾರರ ಮನೆಯಲ್ಲಿ ಎದುರುದಾರರ ತಂಗಿಯರು, ತಾಯಿ , ತಂದೆ ಹಾಗೂ

ತಂಗಿಯ ಗಂಡ  ವಾಸವಾಗಿದ್ದಾರೆ. ಸದರಿ ಎಲ್ಲ ವ್ಯಕ್ತಿಗಳ ವಿರುದ್ದ ನಾನು ಕಾರವಾರದ ನ್ಯಾಯಾಯಾಲಯದಲ್ಲಿ ವರದಕ್ಷಿಣೆ ಕಿರುಕುಳ ಮಾಡಿದ ಬಗ್ಗೆ ಪ್ರಕರಣ ದಾಖಲಿಸಿರುತ್ತೇನೆ. ಹೊನ್ನಾವರದಲ್ಲಿ ವಾಸವಾಗಿರುವ ಎದುರುದಾರರ ತಂಗಿ ಯ ಗಂಡ ಭಟ್ಕಳ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ. ಎದುರುದಾರರ ಇಬ್ಬರು ತಂಗಿಯವರು  ಅವರವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದಾರೆ ಎದುರುದಾರರ ಮನೆಯಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ.  ಎದುರುದಾರರ ಇನ್ನೊಬ್ಬಳು ತಂಗಿಗೆ ಮದುವೆ ಆಗಿಲ್ಲ. ಎದುರುದಾರರ ತಂದೆ ತಾಯಿಗೆ ವಯಸ್ಸು ಎಷ್ಟು ಆಗಿದೆ ಎಂದು ನನಗೆ ಗೊತ್ತಿಲ್ಲ ಅದರೆ ಅವರು ಗಟ್ಟಿ ಆಗಿದ್ದಾರೆ. ಎದು ರುದಾರರ ತಂದೆ ತಾಯಿಗೆ ವಯಸ್ಸು ಆಗಿದೆ ಮತ್ತು ಅವರಿಗೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ.  ಎದುರುದಾರರಿಗೆ ಅವರ  ತಂದೆ ತಾಯಿ ಹಾಗೂ ಮದುವೆಯಾಗದ ತಂಗಿಯನ್ನು ನೋಡಿಕೊಳ್ಳುವ  ಜವಾಬ್ದಾರಿ ಇದೆ ಎಂದರೆ ತಂದೆ ಹಾಗೂ ತಂಗಿ ಕೆಲಸ ಮಾಡುತ್ತಾರೆ ಎಂದು



ಉತ್ತರಿಸಿರುತ್ತಾರೆ. ತಂದೆ ಬಿಸ್ಮಿಲ್ಲಾ ಚಿಕನ್ ಅಂಗಡಿ ನಡೆಸುತ್ತಾರೆ. ಸದರಿ ಅಂಗಡಿ ಯಾರ ಹೆಸರಿನಲ್ಲಿ ಇದೆ ಗೊತ್ತಿಲ್ಲ. ಅಂತಹ ಅಂಗಡಿ ಯಾವುದೂ ಇಲ್ಲ ಎಂದರೆ ಸರಿಯಲ್ಲ.  ಎದುರುದಾರರ ತಂದೆ ಯವರೂ ಯಾವುದೇ ಅಂಗಡಿ ನಡೆಸುತ್ತಿಲ್ಲ ಎಂದರೆ ಸರಿಯಲ್ಲ.  ಎದುರುದಾರರರಿಗೆ ಬೇರೆ ಮನೆ ಮಾಡಲು ನಾನು ಪೀಡಿಸುತ್ತಾ ಇದ್ದೇನು ಎಂದರೆ ಸರಿಯಲ್ಲ. ನಾನು  ಯಾವತ್ತೂ ಎದುರುದಾರರ ಕುಟುಂಬವನ್ನು ಪ್ರೀತಿಯಿಂದ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ.  ಎದುರುದಾರರು ಬೇರೆ ಮನೆ ಮಾಡುವುದಿಲ್ಲ ಎಂಬ ಕಾರಣಕ್ಕೆ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ಎದುರುದಾರರು ನನ್ನನ್ನು ನೋಡಿಕೊಳ್ಳಲು ತಿರಸ್ಕಾರ ಮಾಡಿಲ್ಲ ಎಂದರೆ ಸರಿಯಲ್ಲ.  ನಾನು ವಿನಾಕಾರಣ ಬ್ಲೇಡಿನಲ್ಲಿ ಕೈಯನ್ನು ಕತ್ತರಿಸಿಕೊಳ್ಳುವುದು ಮಾಡುತ್ತಿದ್ದೆ ಎಂದರೆ ಎದುರುದಾರರೇ ನನ್ನ ಮೇಲೆ ಹಲ್ಲೆ ಮಾಡುತ್ತಿದ್ದರು ಎಂದು ಸಾಕ್ಷಿ ಉತ್ತರಿಸಿರುತ್ತಾರೆ.ನಾನು ಸುಳ್ಳು ದೂರನ್ನು ಸಾಂತ್ವನ ಕೇಂದ್ರಕ್ಕೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.  ನಾನು ಯಾವುದೇ ಸಕಾರಣ ಇಲ್ಲದೇ ಎದುರುದಾರರ ಮನೆಯನ್ನು ತೊರೆದುಹೋಗಿದ್ದರಿಂದ ನನಗೆ ಜೀವನಾಂಶವನ್ನು ಕೊಡಲು ಎದುರುದಾರರು ಭಾಧ್ಯಸ್ತರಲ್ಲ ಎಂದರೆ ಸರಿಯಲ್ಲ.  ಎದುರುದಾರರು ನಾನು ಹೇಳುವಂತಹ ಯಾವುದೇ ಉದ್ಯೋಗವನ್ನು ಮಾಡುವುದಿಲ್ಲ ಎಂದರೆ ಸರಿಯಲ್ಲ.   ಎದುರುದಾರರರಿಗೆ ಚಿಕನ್ ಮತ್ತು ಮಟನ್ ಅಂಗಡಿ ಇದೆ. ಮನೆ ಕಟ್ಟಿಸಿದ್ದಾರೆ ಹಾಗೂ ವಾಹನ ಖರೀದಿ ಮಾಡಿದ್ದಾರೆ ಅವರಿಗೆ ತಿಂಗಳಿಗೆ 1 ಲಕ್ಷ ಆದಾರ ಇದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ

ನಾನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಅಂತಹ ಯಾವುದೇ ದಾಖಲೆ ಇಲ್ಲದ ಕಾರಣ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನ ಗಂಡನಿಂದ ವಿಚ್ಛೇದನ ಪಡೆಯುವ ಪೂರ್ವದಲ್ಲಿ ಜೀವನಾಂಶವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳವಂತೆ ಜೀವನಾಂಶ ನೀಡಲು ಎದುರುದಾರರು ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**